ಅಸಲು ದಾವೆ ಸಂಖ್ಯೆ -299/2022
ಪಿ.ಡಬ್ಲ್ಯು - 01
ದಿನಾಂಕಃ 17-12-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ. ವಿ ಬಿ ಟಿ ವಕೀಲರಿಂದ**

ನೀವು ಫಕ್ಕಿರಪ್ಪನನ್ನು ಮದುವೆಯಾಗಿ ಎಷ್ಟು ವರ್ಷ ಆಯಿತು ಎಂದರೆ ಆಗ ನಾನು ಚಿಕ್ಕವಳಿದ್ದೇನು ನನಗೆ 12 ವರ್ಷ ಆಗಿತ್ತು. ಅಕ್ಕ ತಂಗಿಯರನ್ನು ಅಣ್ಣ ತಮ್ಮಂದಿರಿಗೆ ಕೊಟ್ಟಿದ್ದರು. ನಿಮ್ಮ ಮದುವೆಯ ಭಾವ ಚಿತ್ರವಾಗಲಿ ಅಥವಾ ಬೇರೆ ದಾಖಲೆಯಾಗಲಿ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ತವರು ಮನೆ ಬಿಟ್ಟು ಫಕ್ಕೀರಪ್ಪನ ಜೊತೆಯಲ್ಲಿ 30/40 ವರ್ಷ ಜೀವನ ಮಾಡಿದ್ದೀರಿ ಎಂದು ತೋರಿಸಲು ಏನಾದರೂ ದಾಖಲೆ ಇದೆಯಾ ಎಂದರೆ ದಾಖಲೆ ಇಲ್ಲ ಆದರೆ ಆಧಾರ ಕಾರ್ಡ ಇರುತ್ತದೆ. ಯಲವಿಗಿ ಗ್ರಾಮದ ವಿಳಾಸದ ಆಧಾರ ಕಾರ್ಡ ಮತ್ತು ಸರ್ಕಾರಿ ದಾಖಲೆಗಳು ಇದೆಯಾ ಎಂದರೆ ಇಲ್ಲ. ನಿಮ್ಮ ಮಗಳ ಮದುವೆಯ ಸಮಯದಲ್ಲಿ ಮತ್ತು ಧಾರ್ಮಿಕ ಕಾರ್ಯಕ್ರಮಗಳಲ್ಲಿ ನಿಮ್ಮ ಗಂಡ ಇರುವ ಕುಟುಂಬದ ಭಾವ ಚಿತ್ರ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಗಂಡ ನಿಮ್ಮ ಮಗಳ ಜೊತೆ ಇರುವ ಭಾವ ಚಿತ್ರ ಏನಾದರೂ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ಯಲವಿಗಿ ಗ್ರಾಮದಲ್ಲಿ ಬೇರೆ ಜನರ ಕಾರ್ಯಕ್ರಮಗಳಲ್ಲಿ ನೀವು ಮತ್ತು ನಿಮ್ಮ ಗಂಡ ಇರುವ ಭಾವ ಚಿತ್ರ ಏನಾದರೂ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಫಕ್ಕೀರಪ್ಪ ಯಾವಾಗ ತೀರಿಕೊಂಡರು ಎಂದರೆ ಅವರು ತೀರಿಕೊಂಡು 22 ವರ್ಷ ಆಗಿರುತ್ತದೆ. ಫಕ್ಕೀರಪ್ಪ ಅವರ ತಂದೆಯ ಹೆಸರು ಏನು ಎಂದರೆ ಸಂಕಪ್ಪ ಇರುತ್ತದೆ. ನಿಮ್ಮ ಗಂಡನ ಮರಣ ಉತಾರದಲ್ಲಿ ಹೆಂಡತಿ ಎಂದು ನಿಮ್ಮ ಹೆಸರು ಇಲ್ಲ ಎಂದರೆ ಇದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ- 10 ನ್ನು ತೋರಿಸಿದ್ದು ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿಯು ಎಷ್ಟು ವರ್ಷದಿಂದ ಕಬ್ಜಾದಲ್ಲಿ ಇದ್ದಾರೆ ಎಂದರ ಅಂದಾಜು 15 ವರ್ಷದಿಂದ ಇದ್ದಾರೆ. ಅವರು ಎಷ್ಟು ವರ್ಷದಿಂದ ಇದ್ದಾರೆ ಎಂದು ನಿಖರವಾಗಿ ನಿಮಗೆ ಮಾಹಿತಿ ಇಲ್ಲ ಎಂದರೆ ಸರಿ. ಈಗ ದಾವಾ ಆಸ್ತಿಯಲ್ಲಿ ಯಾರು ಕಬ್ಜೆಯಲ್ಲಿ

ಇದ್ದಾರೆ ಎಂದರೆ 1 ನೇ ಪ್ರತಿವಾದಿಯೇ ಇದ್ದಾರೆ. ನಿಮ್ಮ ಪ್ರಕಾರ ದಾವಾ ಆಸ್ತಿಯಲ್ಲಿ ಬೇರೆ ಯಾರಾದರೂ ಇದ್ದಾರಾ ಎಂದರೆ ದಾವಾ ಆಸ್ತಿಯಲ್ಲಿ 2 ಮನೆಗಳು ಇದ್ದು ಒಂದರಲ್ಲಿ 1 ನೇ ಪ್ರತಿವಾದಿ ಇದ್ದಾರೆ ಇನ್ನೊಂದು ಮನೆಯನ್ನು ಬಾಡಿಗೆಗೆ ಕೊಟ್ಟಿದ್ದಾರೆ. ಯಾವ ಮನೆಯಲ್ಲಿ 1 ನೇ ಪ್ರತಿವಾದಿ ಇದ್ದಾರೆ ಮತ್ತು ಯಾವಾ ಮನೆಯಲ್ಲಿ ಬಾಡಿಗೆದಾರರು ಇದ್ದಾರೆ ಎಂದು ಹೇಳಲು ಆಗುತ್ತದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಬಾಡಿಗೆದಾರರ ಹೆಸರು ಹೇಳಲು ಆಗುತ್ತದೆಯಾ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಇರುವ ಮನೆಯ ಮತ್ತು ಬಾಡಿಗೆದಾರರು ಇರುವ  ಮನೆಯ ಚಕ್ಕಬಂದಿ ಹೇಳಲು ಆಗುತ್ತದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯು ಯಾವ ಆಧಾರದ ಮೇಲೆ ದಾವಾ ಆಸ್ತಿಯಲ್ಲಿ ಕಬ್ಜೆ ಇದ್ದಾರೆ ಎಂದರೆ ಅವಳು ಇರಲಿ ಎಂದು ನಾವೇ ಕೊಟ್ಟಿರುತ್ತೇವೆ. ಎಷ್ಟನೆ ಇಸವಿಯಲ್ಲಿ ಕೊಟ್ಟಿದ್ದೀರಿ ಎಂದರೆ 15 ವರ್ಷದ ಹಿಂದೆ ಕೊಟ್ಟಿದ್ದೇವೆ. ಇದರ ಬಗ್ಗೆ ಏನಾದರೂ ದಾಖಲೆಯ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ನೀವು ಕೊಟ್ಟಿದ್ದನ್ನು ಹೊರತುಪಡಿಸಿ ಬೇರೆ ಯಾರು 1 ನೇ ಪ್ರತಿವಾದಿಗೆ ನೀಡಿರುವುದಿಲ್ಲ ಎಂದರೆ ಸರಿ.

1 ನೇ ಪ್ರತಿವಾದಿಗೆ ಕೊಡುವ ಮೊದಲು ದಾವಾ ಆಸ್ತಿಯು ಯಾರ ಹೆಸರಿನಲ್ಲಿ ಇತ್ತು ಎಂದರೆ ನನಗೆ ಮಾಹಿತಿ ಇಲ್ಲ.  ದಾವಾ ಆಸ್ತಿಯಲ್ಲಿ ನೀವು ಇದ್ದೀರಿ ಎಂದು ತೋರಿಸಲು ಏನಾದರೂ ದಾಖಲೆ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಯಾರ ಜೊತೆ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ಎಷ್ಟು ಜನ ಮಕ್ಕಳು ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ಮಹಾಂತೇಶ ಎಂಬ ಮಗ ಇದ್ದಾನೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯನ್ನು ಮಜ್ಜೂರ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿದ್ದೇವು. ಇದರ ಬಗ್ಗೆ ಏನಾದರೂ ದಾಖಲೆ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಗೆ  ಮಹಾಂತೇಶ ಎಂಬ ಮಗನು ದಿಃ 10-06-1983 ರಲ್ಲಿ ಜನಿಸಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ಜನ್ಮ ದಾಖಲೆ ಬಗ್ಗೆ ಮಾಹಿತಿ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮಗೆ ಎಷ್ಟು ವಯಸ್ಸು ಎಂದರೆ 75 ವರ್ಷ.

ಫಕ್ಕೀರಪ್ಪ ಜನ್ಮ ದಿನಾಂಕ ಗೊತ್ತಿದೆಯಾ ಎಂದರೆ ಇಲ್ಲ.  ನಿಮ್ಮ ಮತ್ತು ನಿಮ್ಮ ಮಗಳ ಆಧಾರಕಾರ್ಡನಲ್ಲಿ ಕುಂದಗೋಳ ತಾಲೂಕಿನ ಚಾಕಲಬ್ಬಿ ಗ್ರಾಮದ ವಿಳಾಸ ಇದೆ ಎಂದರೆ ಸರಿ. ಕುಂದಗೋಳ ತಾಲೂಕಿನ ಚಾಕಲಬ್ಬಿ ಗ್ರಾಮದಲ್ಲಿ ಶಿರೂರ ಅಡ್ಡ ಹೆಸರಿನ  ಎಷ್ಟು ಮನೆತನಗಳು

ಇವೆ ಎಂದರೆ ನಮ್ಮದು ಒಂದೇ ಮನೆತನ ಇರುತ್ತದೆ. ದಾವಾ ಆಸ್ತಿಗೆ 1 ನೇ ಪ್ರತಿವಾದಿಯ ಹೆಸರು ಯಾವಾಗ ದಾಖಲಾಯಿತು ಎಂದು ನಿಮಗೆ ಮಾಹಿತಿ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯ ಅಳತೆ ಎಷ್ಟು ಇದೆ ಎಂದರೆ ಒಂದು ಗುಂಟೆ ಮೇಲೆ ಆಗುತ್ತದೆ. ದಾವಾ ಆಸ್ತಿಯಲ್ಲಿ ಬಸವ ವಸತಿ ಯೋಜನೆ ಅಡಿಯಲ್ಲಿ ಪಾರವ್ವ ರವರು ಮನೆ ಕಟ್ಟಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಉತಾರದಲ್ಲಿ 1 ನೇ ಪ್ರತಿವಾದಿಯ ಹೆಸರು ಯಾವ ಆಧಾರದ ಮೇಲೆ ದಾಖಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಮೂಲತಃ ದಾವಾ ಆಸ್ತಿ 1 ನೇ ಪ್ರತಿವಾದಿಗೆ ಹೇಗೆ ಬಂದಿತು ಎಂದರೆ ನನಗೆ ಮಾಹಿತಿ ಇಲ್ಲ.

ದಾವಾ ಆಸ್ತಿಯ ಒಟ್ಟು ಕಿಮತ್ತು ಎಷ್ಟು ಎಂದರೆ 10 ಲಕ್ಷ ಇರುತ್ತದೆ. ದಾವಾ ಆಸ್ತಿಯ ಕಿಮ್ಮತ್ತು ಕಡಿಮೆ ಆಗುತ್ತದೆಯಾ ಅಥವಾ ಹೆಚ್ಚಾಗುತ್ತದೆ ಎಂದರೆ ಹೆಚ್ಚಾಗುತ್ತದೆ ಎಂದು ನುಡಿಯುತ್ತಾರೆ. ಪ್ರಸ್ತುತ ದಾವಾ ಆಸ್ತಿಯ ಯಾರ ಹೆಸರಿನಲ್ಲಿ ಇದೆ ಎಂದು ನಿಮ್ಮ ಸ್ವಂತಕ್ಕೆ ಮಾಹಿತಿ ಇಲ್ಲ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಯಾರ ಯಾರ ವಿರುದ್ಧ ದಾವೆಯನ್ನು ದಾಖಲಿಸಿದ್ದೀರಿ ಎಂದು ನಿಮಗೆ ಮಾಹಿತಿ ಇದೆಯಾ ಎಂದರೆ ಇಲ್ಲ. 1 ನೇ ಪ್ರತಿವಾದಿಯನ್ನು ಬಿಟ್ಟು ಬೇರೆ ಯಾರ ಮೇಲೆ ದಾವೆಯನ್ನು ಮಾಡಿದ್ದೀರಿ ಎಂದರೆ ನನಗೆ ಗೊತ್ತಿಲ್ಲ. ದಾವೆಯಲ್ಲಿ ಸಹಿಯನ್ನು ಮಾಡಿದ್ದನ್ನು ಬಿಟ್ಟು ಬೇರೆ ಯಾವುದೇ ವಿಚಾರ ನಿಮಗೆ ಗೊತ್ತಿಲ್ಲ ಎಂದರೆ ಸರಿ. ಮುಂದುವರೆದು ನನಗೆ ಮಾಹಿತಿ ಇದೆ ಎಂದು ನುಡಿಯುತ್ತಾರೆ. ಎಷ್ಟು ಜನರ ಮೇಲೆ ನೀವು ದಾವೆಯನ್ನು ಮಾಡಿದ್ದೀರಿ ಎಂದರೆ ನನಗೆ ಮಾಹಿತಿ ಇಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಯಾರ ಯಾರ ನಡುವೆ ಕಾಗದ ಪತ್ರಗಳು ಆಗಿದೆ ಎಂದು ನಿಮಗೆ ಮಾಹಿತಿ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಯಾರ ಯಾರ ನಡುವೆ ಯಾವ ತಾರಿಖಿನಂದು ಜಗಳ, ತಂಟೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ ಯಾರು ಮಾಲೀಕರು, ಯಾರು ವಹಿವಾಟು ಮತ್ತು ಕಬ್ಜಾದಲ್ಲಿ ಇದ್ದಾರೆ ಎಂದು ನಿಮಗೆ ನಿಖರವಾಗಿ ಮಾಹಿತಿ ಇಲ್ಲ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಏನು ಪರಿಹಾರ ಕೇಳಿ ದಾವೆಯನ್ನು ಹೂಡಿದ್ದೀರಿ ಎಂದರೆ ನನಗೆ ಗೊತ್ತಿಲ್ಲ. ಹಾಗಾಗಿ ಈ ದಾವೆಯಲ್ಲಿ ದಾವಾ ಪತ್ರಗಳಿಗೆ ಸಹಿಯನ್ನು ಮಾಡಿದ್ದನ್ನು ಹೊರತುಪಡಿಸಿ ನಿಮಗೆ ಯಾವುದೇ ಉಳಿದ ವಿಚಾರ ಗೊತ್ತಿಲ್ಲ ಎಂದರೆ ಆಸ್ತಿ ಸಲುವಾಗಿ

ಮಾಡಿದ್ದೇನೆ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಪಂಚಾಯತಿಯಲ್ಲಿ ಏನಾದರೂ ದಾಖಲೆಗಳು ಆಗಿವೆ ಎಂದು ನಿಮಗೆ ಮಾಹಿತಿ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಪ್ರಸ್ತುತವಾಗಿ 2 ನೇ ಪ್ರತಿವಾದಿ ಕಬ್ಜೆಯಲ್ಲಿ ಇದ್ದಾರೆ ಎಂದರೆ ಸರಿ. ಅವರು ಯಾವ ಆಧಾರದ ಮೇಲೆ ಕಬ್ಜೆಯಲ್ಲಿ ಇದ್ದಾರೆ ಎಂದು ನಿಮಗೆ ಮಾಹಿತಿ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಮೃತ ಫಕ್ಕೀರಪ್ಪ ಶಿರೂರ ರವರ ಕಾನೂನು ಬದ್ಧ ಹೆಂಡತಿ ಇರುವುದಿಲ್ಲ ಎಂದರೆ ಸರಿಯಲ್ಲ. ಮೃತ ಫಕ್ಕೀರಪ್ಪ ಶಿರೂರ ರವರಿಗೆ ಪಾರವ್ವ ಎಂಬ ಹೆಂಡತಿ ಇದ್ದು ಅವರಿಗೆ ಮಹಾಂತೇಶ ಎಂಬ ಮಗ ಇದ್ದರು ಸಹ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಮಹಾಂತೇಶನನ್ನು ಉದ್ದೇಶ ಪೂರ್ವಕವಾಗಿ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ.

ರೇಣುಕಾ ಎಂಬುವವರು ಜೀವಂತ ಇದ್ದಾರಾ ಎಂದರೆ ಇದ್ದಾರೆ. ಅವರನ್ನು ಸೇರಿಕೊಂಡು ಈ ದಾವೆಯನ್ನು ನೀವು ಮಾಡಿರುವುದಿಲ್ಲ ಎಂದರೆ ಸರಿ. ನೀವಾಗಲಿ, ರೇಣುಕಾ ಆಗಲಿ ಫಕ್ಕೀರಪ್ಪ ರವರಿಗೆ ಸಂಬಂಧಿಕರಾಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಕ್ಕನ ಮೊಮ್ಮಗನಿಗೆ ನನ್ನ ಮಗಳ ಮಗಳನ್ನು ಮದುವೆ ಮಾಡಿಕೊಟ್ಟಿದ್ದೇವೆ. ದಾವೆಗೆ ಸಂಬಂಧಪಗಟ್ಟಂತೆ ಸುಳ್ಳು ದಾಖಲಾತಿಗಳನ್ನು ಸೃಷ್ಠಿಸಿ ಕೊಂಡಿದ್ದೀರಿ ಎಂದರೆ ಸರಿಯಲ್ಲ. ಫಕ್ಕೀರಪ್ಪ ರವರಿಗೆ ಪಾರವ್ವ ಮತ್ತು ಅವರ ಮಗ ಮಾತ್ರ ಕಾನೂನು ಬದ್ಧ ವಾರಸುದಾರರು ನೀವು ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.